**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್.ಅರುಣ್ ರವರು ನಿಯಮ 72 ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ:154 ಕ್ಕೆ ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಹೇಳಿಕೆ**

**ವಿಷಯ:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ನೇಮಕಾತಿ ಅಧಿಸೂಚನೆ ದಿನಾಂಕ:08.09.2016 ಅಡಿಯಲ್ಲಿ ಖಾಲಿ ಉಳಿದಿರುವ ಹುದ್ದೆಗಳ ವಿವರ ಮತ್ತು ಸದರಿ ನೇಮಕಾತಿ ದಿನಾಂಕದಂದು ಅಂಗವಿಕಲರಿಗೆ ಮೀಸಲಿಟ್ಟ ಹುದ್ದೆಗಳು (Carry Forward) ಮಾಡಲು ಅನ್ವಯಿಸುವುದಿಲ್ಲವೆಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಸ್ಪಷ್ಟೀಕರಣ ನೀಡಿದ್ದರು ಮುಂದಿನ ನೇಮಕಾತಿಗೆ (Carry Forward) ಮಾಡಿದ್ದರ ವಿಷಯದ ಬಗ್ಗೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/40360/2015-16, ದಿನಾಂಕ: 08.09.2016 ರ ಅನ್ವಯ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿ ಖಾಲಿ ಉಳಿದಿರುವ ಹುದ್ದೆಗಳ ವಿವರ ಕೆಳಗಿನಂತಿದೆ:-

| ಕ್ರ. ಸಂ. | ಹುದ್ದೆಯ ಹೆಸರು | ಮಂಜೂರಾದ ಹುದ್ದೆಗಳು | ಭರ್ತಿಯಾಗದೆ ಖಾಲಿ ಉಳಿದ ಹುದ್ದೆಗಳು | ಭರ್ತಿಯಾಗದ ಅಂಗವಿಕಲ ಕೋಟಾದ ಹುದ್ದೆಗಳು |
|---|---|---|---|---|
| 1. | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) | 10 | 0 | 0 |
| 2. | ಸಹಾಯಕ ಇಂಜಿನಿಯರ್(ವಿ) | 255 | 6 | 3 |
| 3. | ಸಹಾಯಕ ಇಂಜಿನಿಯರ್(ಸಿವಿಲ್) | 11 | 0 | 0 |
| 4. | ಸಹಾಯಕ ಲೆಕ್ಕಾಧಿಕಾರಿ | 33 | 0 | 0 |
| 5. | ಕಿರಿಯ ಇಂಜಿನಿಯರ್(ವಿ) | 304 | 11 | 7 |
| 6. | ಕಿರಿಯ ಇಂಜಿನಿಯರ್(ಸಿವಿಲ್) | 12 | 0 | 0 |
| 7. | ಸಹಾಯಕ | 83 | 1 | 1 |
| 8. | ಕಿರಿಯ ಸಹಾಯಕ | 20 | 0 | 0 |
| | ಒಟ್ಟು | **728** | **18** | **11** |

ಭರ್ತಿಯಾಗದೆ ಖಾಲಿ ಉಳಿದಿದ್ದ 6 ಸಂಖ್ಯೆಯ ಸಹಾಯಕ ಇಂಜಿನಿಯರ್ (ವಿ) ಮತ್ತು 11 ಸಂಖ್ಯೆಯ ಕಿರಿಯ ಇಂಜಿನಿಯರ್ (ವಿ) ಹುದ್ದೆಗಳನ್ನು ನಿಗಮದ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/21723/2021-22, ದಿನಾಂಕ: 01.02.2022 ರಲ್ಲಿ ಅಧಿಸೂಚಿಸಿ ಕ್ರಮ ಕೈಗೊಳ್ಳಲಾಗಿರುತ್ತದೆ.

...2

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 235 ಸೇನೆನಿ 2012, ದಿನಾಂಕ: 22.11.2016 ರಲ್ಲಿ ಈ ಕೆಳಕಂಡಂತೆ ತಿಳಿಸಲಾಗಿರುತ್ತದೆ:

"ಒಂದು ವೇಳೆ ಅಧಿಸೂಚಿತ ಅಂಗವಿಕಲತೆ ಹೊಂದಿರುವ ಅಭ್ಯರ್ಥಿ ಲಭ್ಯವಿಲ್ಲದೇ ಇದ್ದಲ್ಲಿ ಅಂತಹ ರಿಕ್ತ ಸ್ಥಾನವನ್ನು ಮುಂದಿನ ನೇಮಕಾತಿಗೆ ಮುಂದಕ್ಕೊಯ್ಯತಕ್ಕದ್ದು (Carry Forward). ಮುಂದಿನ ನೇಮಕಾತಿಯಲ್ಲಿಯೂ ಅಧಿಸೂಚಿತ ಅಂಗವಿಕಲತೆ ಹೊಂದಿರುವ ಅಭ್ಯರ್ಥಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ಮೀಸಲಾತಿಯಡಿ ಬರುವ ಆಯಾ ಪ್ರವರ್ಗದ ಇತರ ಅಂಗವಿಕಲತೆಯುಳ್ಳ ಅರ್ಹ ವಿಕಲಚೇತನ ಅಭ್ಯರ್ಥಿಯಿಂದ ಭರ್ತಿ ಮಾಡತಕ್ಕದ್ದು. ಒಂದು ವೇಳೆ ಯಾವುದೇ ವಿಕಲಚೇತನ ಅಭ್ಯರ್ಥಿ ಲಭ್ಯವಿಲ್ಲದಿದ್ದಲ್ಲಿ, ಆಯಾ ಪ್ರವರ್ಗದ ಇತರೆ ಅರ್ಹ ಅಭ್ಯರ್ಥಿಯಿಂದ ಭರ್ತಿ ಮಾಡಿಕೊಳ್ಳತಕ್ಕದ್ದೆಂದು ಎಲ್ಲಾ ನೇಮಕಾತಿ ಪ್ರಾಧಿಕಾರಿಗಳಿಗೆ ಸೂಚಿಸಲಾಗಿದೆ".

ಈ ಆದೇಶದಲ್ಲಿನ ಸೂಚನೆಗಳನ್ನು, ಈ ಆದೇಶದ ದಿನಾಂಕದ ನಂತರ ಮಾಡುವ ಎಲ್ಲಾ ನೇರ ನೇಮಕಾತಿ ಅಧಿಸೂಚನೆಗಳಲ್ಲಿ ಅಳವಡಿಸಿಕೊಂಡು ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲು ಎಲ್ಲಾ ನೇಮಕಾತಿ ಪ್ರಾಧಿಕಾರಗಳಿಗೆ ಸೂಚಿಸಲಾಗಿದೆ."

ಸರ್ಕಾರದ ದಿನಾಂಕ: 22.11.2016 ರ ಆದೇಶವು, ಸದರಿ ಆದೇಶದ ದಿನಾಂಕದ ನಂತರ ಮಾಡಲಾಗುವ ಎಲ್ಲಾ ನೇಮಕಾತಿ ಅಧಿಸೂಚನೆಗಳಿಗೆ ಅನ್ವಯವಾಗುತ್ತದೆ. ಆದರೆ ಕವಿಪ್ರನಿನಿಯ ಉದ್ಯೋಗ ಪ್ರಕಟಣೆಯನ್ನು ದಿನಾಂಕ: 08.09.2016 ರಂದು ಪ್ರಕಟಿಸಲಾಗಿದ್ದು, ಚಾಲ್ತಿಯಲ್ಲಿದ್ದ ಅಂದಿನ ನಿಯಮಗಳನುಸಾರ ಭರ್ತಿಯಾಗದೆ ಖಾಲಿ ಉಳಿದ ಅಂಗವಿಕಲ ಕೋಟಾದಡಿಯಲ್ಲಿನ ಹುದ್ದೆಗಳನ್ನು ಮುಂದಿನ ನೇಮಕಾತಿಗೆ ಕೊಂಡೊಯ್ಯಲಾಗಿರುತ್ತದೆ.

ಆದುದರಿಂದ, ಭರ್ತಿಯಾಗದೆ ಖಾಲಿ ಉಳಿದ ಅಂಗವಿಕಲ ಕೋಟಾದಡಿಯಲ್ಲಿನ ಹುದ್ದೆಗಳನ್ನು ಮುಂದಿನ ನೇಮಕಾತಿಗೆ ಕೊಂಡೊಯ್ಯಲಾಗಿರುವ ಕ್ರಮವು ನಿಯಮಾನುಸಾರವಾಗಿರುತ್ತದೆ.

ಸಂಖ್ಯೆ: ಎನರ್ಜಿ 73 ಇಬಿಎಸ್ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು.